O.S. ನಂಬರ: 68/2017

ಡಿ. ಡಬ್ಲ್ಯೂ: 1

ದಿ: 02-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲು: ವಾದಿ ಪರ ಶ್ರೀ ಎಮ್.ಎ.ಆರ್. ವಕೀಲರಿಂದ:</u>

ನಾನು ಮುಸ್ಲಿಂ ಸಮುದಾಯದ ರಾಜ್ಯ ಕಾರ್ಯದರ್ಶಿ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಅಲ್ಪ ಸಂಖ್ಯಾತರ ರಾಜ್ಯ ಕಾರ್ಯದರ್ಶಿ ಇರುವುದರಿಂದ ಇತ್ತೀಚಿನ ದಿನಗಳಲ್ಲಿ ಹಾಲಿ ಸಂಸದರು ಮುಖ್ಯ ಮಂತ್ರಿಯವರ ಕುರಿತಾಗಿ ನೀಡಿದ ಹೇಳಿಕೆ ವಿಚಾರವಾಗಿ ಸಮುದಾಯ ಹಾಗೂ ಪಕ್ಷದ ಪರವಾಗಿ ನಾನು ನೀಡಿದ ಹೇಳಿಕೆ ಕರಾವಳಿ ದಿನಪತ್ರಿಕೆ ಹಾಗೂ ಉಳಿದ ದಿನಪತ್ರಿಕೆಗಳಲ್ಲಿ ವರದಿಯಾಗಿತ್ತು. ಪ್ರಸ್ತುತ ಸಂಸತ್ತಿನ ಚುನಾವಣೆಯಲ್ಲಿ ಜಿಟಿನಾಯ್ಕ ವಕೀಲರಿಗೆ ಕಾಂಗ್ರೇಸ್ ಟಿಕೇಟ್ ನೀಡಲು ನೀಡಿದ ಹೇಳಿಕೆಯಲ್ಲಿ ನನ್ನ ಹೆಸರಿದೆ ಎಂದರೆ ಸಾಕ್ಷಿ ಆ ಕುರಿತಾಗಿ ನಾನು ಭಾಗವಹಿಸಿಲ್ಲ, ಅಲ್ಲಿ ನವಾಜ ಶೇಖ ಎಂದು ಬರೆದಿರುವುದು ನನಗೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ. ಸದರಿ ಪತ್ರಿಕಾ ವರದಿಯಲ್ಲಿ ಶಬ್ಬೀರ ಶೇಖ ಹಾಗೂ ಇತರರ ಹೆಸರು ಇದೆ ಎಂದರೆ ಮಾಹಿತಿ ಇಲ್ಲ. ಕರಾವಳಿ ದಿನಪತ್ರಿಕೆಯಲ್ಲಿ ಎರಡು ತಿಂಗಳಿಗೊಮ್ಮೆ ನಾನು ಯಾವುದಾದರೂ ಹೇಳಿಕೆ ಕೊಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಕರಾವಳಿ ದಿನಪತ್ರಿಕೆಯೊಂದಿಗೆ ನನಗೆ ಒಳ್ಳೆಯ ಒಡನಾಟ ಇದೆ ಎಂದರೆ ಸಾಕ್ಷಿ ಎಲ್ಲ ದಿನಪತ್ರಿಕೆ ವರದಿಗಾರರರಿಗೆ ನಾನು ಗೌರವದಿಂದ ಕಾಣುತ್ತೇನೆ ಎಂದು ಹೇಳುತ್ತಾರೆ.

ಇಬ್ರಾಹಿಂ ಶೇಖ ಸಮುದಾಯದ ಸೌಹಾರ್ದತೆ ಕುರಿತು ಲೇಖನ ಪ್ರಕಟಿಸುವಂತೆ ಕರಾವಳಿ ದಿನಪತ್ರಿಕೆಯವರಿಗೆ ನೀಡಿದರೆ ಕೆಲವೊಮ್ಮೆ ಪ್ರಕಟಿಸುವುದಿಲ್ಲ, ಹಾಗೂ ಪ್ರಕಟಿಸಿದಾಗಲೂ ಸಹ ಅದಕ್ಕೆ ಇಂತಿಷ್ಟು ಚಾರ್ಜ ಹಣ ವಸೂಲಿ ಮಾಡುತ್ತಾರೆ ಎಂದರೆ ಮಾಹಿತಿ ಇಲ್ಲ. 2016 ರ ಕ್ಕಿಂತ ಮೊದಲು ಅಂಜುಮನ್ ಕಮಿಟಿ ಚುನಾಯಿತ ಸದಸ್ಯರು ಹಣಕಾಸಿನ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಮಾಡಿದ ಗುಮಾನಿಯಲ್ಲಿ ನಾನೂ ಸಹ ಆ ಕುರಿತು ವ್ಯಕ್ತಪಡಿಸಿದ್ದೆ ಎಂದರೆ ಸರಿಯಲ್ಲ. ಶಾದಿಮಹಲ್ ಕಟ್ಟಲು ಸರ್ಕಾರದಿಂದ ಹಾಗೂ ವಕ್ಫ ಬೋರ್ಡನಿಂದ ಎಷ್ಟು ಹಣ ಬಂದಿದೆ ಎಂದು ಮಾಹಿತಿ ಇಲ್ಲ, ಆದರೆ ಹಣ ಬಂದ ಬಗ್ಗೆ ಮತ್ತು ಕಟ್ಟಡದ ಸಾಲ ಪಡೆದ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಇದೆ.

ಅಂಜುಮನ್ ಸಂಸ್ಥೆಯ ಆಡಳಿತ ಮಂಡಳಿಯವರು ಶಾದಿಮಹಲ್ ಕಟ್ಟಡದ ಹಾಗೂ ಇತರ ವ್ಯವಹರಣೆಯಲ್ಲಿ ಹಣ ದುರ್ಬಳಕೆ ಕುರಿತಾಗಿ ರಾಜ್ಯ ವಕ್ಫ ಬೋರ್ಡಿಗೆ ಅರ್ಜಿ ಸಲ್ಲಿಸಿದ್ದರ ಮೇರೆಗೆ ವಿಚಾರಣೆಯಲ್ಲಿ ರೂ. 60 ಲಕ್ಷ ದುರ್ಬಳಕೆಯಾಗಿದೆ ಎಂದು ಅಂದಾಜಿಸಲಾಗಿದೆ ಎಂದರೆ ಮಾಹಿತಿ ಇಲ್ಲ. ಇದೇ ಕಾರಣಕ್ಕಾಗಿ ಆ ದಿನ ಆಡಳಿತ ಮಂಡಳಿ ರದ್ದು ಮಾಡಿದ್ದರು ಎಂದರೆ ಮಾಹಿತಿ ಇಲ್ಲ. ಸದರಿ ಹಣ ದುರ್ಬಳಕೆ ಮಾಡಿದ ಆಡಳಿತ ಮಂಡಳಿಯಲ್ಲಿ ಮಂಜರ್ ಸಯ್ಯದ್ ಸ್ಕ್ರೇಟರಿ, ಅಜೀಜ್ ಅಹಮ್ಮದ್ ದೊಡ್ಮನಿ ಅಧ್ಯಕ್ಷರು ಎಂದರೆ ಸರಿ. ಆ ನಂತರ ಮಂಡಳಿ ತೆಗೆದು ಹಾಕಿ ಆಡಳಿತಾಧಿಕಾರಿ ನೇಮಕಗೊಂಡಿದ್ದರು ಎಂದರೆ ಅದರ ಅವಧಿ ಮುಕ್ತಾಯಗೊಂಡಿದ್ದರಿಂದ ಆಡಳಿತಾಧಿಕಾರಿ ನೇಮಿಸಿಕೊಂಡಿದ್ದರು ಎಂದು ಹೇಳುತ್ತಾರೆ.

ಸಂಸ್ಥೆಗೆ ಮೂರು ವರ್ಷಕ್ಕೊಮ್ಮೆ ಚುನಾವಣೆ ಮಾಡುವ ವ, ಅಥವಾ ಸಾಮಾನ್ಯ ಸಭೆಯಲ್ಲಿ ಕೋರಂ ಮೇರೆಗೆ ಕಮಿಟಿ ಮುಂದುವರೆಸುವ ಸಮ್ಮತಿ ಮೇರೆಗೆ ಇದ್ದ ಕಮಿಟಿಯನ್ನು ಮುಂದುವರೆಸಲು ಅವಕಾಶ ಇರುತ್ತದೆ. ಅಂಜುಮನ್ ಸಂಸ್ಥೆಗೆ ಜುಲೈ 2018 ರಲ್ಲಿ ಚುನಾವಣೆ ಆಗಿತ್ತು.

ಅಂಜುಮನ್ ಸಂಸ್ಥೆಗೆ ಆಡಳಿತಾಧಿಕಾರಿ ನೇಮಕವಾದ ನಂತರ ಅವರ ಅಡಿಯಲ್ಲಿ ವಾದಿ ಹಾಗೂ ಉಳಿದ ಸದಸ್ಯರು ಸಲಹಾ ಸಮಿತಿಯ ಸದಸ್ಯರೆಂದು ನೇಮಕವಾಗಿದ್ದರು ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನೂ ಸಹ ಇರುತ್ತೇನೆ ಎಂದರೆ ಸರಿ. ಸಾಕ್ಷಿ ನಿಪಿ-4 ಎಂದು ಗುರುತಿಸಲಾದ ಪತ್ರಿಕಾ ಪ್ರಕಟಣೆ ಭಾಗವನ್ನು ತೋರಿಸಿರುತ್ತಾರೆ. ಸದರಿ ಸಭೆಯಲ್ಲಿ ನೂರಾರು ಜನ ಸೇರಿದ್ದು, ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳ ಆಯ್ಕೆ ಕುರಿತಾಗಿ ವಿನಂತಿ ಪತ್ರ ಸಲ್ಲಿಸುವ ಸಮಯದಲ್ಲಿ ತೆಗೆದ ಭಾವಚಿತ್ರ ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ಪ್ರಕಟವಾದ ವಿಷಯದ ಕುರಿತು ನಾನೇ ವರದಿಗಾರರಿಗೆ ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಭಾವ ಬಳಸಿ ನಾನು ಹೇಳಿದಂತೆ ವಿಷಯ ಪ್ರಕಟಿಸಲು ವ್ಯವಸ್ಥೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ನಮೂದಿಸಿದ ಹೆಸರು ಹಾಗೂ ಅವರ ಪದವಿ ಕುರಿತಾಗಿ ಪತ್ರಿಕಾ ಮಾಧ್ಯಮಕ್ಕೆ ಮಾಹಿತಿ ಇರಲಿಲ್ಲ, ಅದನ್ನೆಲ್ಲಾ ನಾನೇ ಪೂರೈಸಿದ್ದೇನೆ ಎಂದರೆ ಸರಿಯಲ್ಲ. "ಅಹತಿ ಹದೀಸ್ " ಭಯೋತ್ಪಾಕರ ಸಂಘಟನೆಗೆ ಸೇರಿದವರು ಎಂದು ನಿಪಿ-5 ರಲ್ಲಿ ನೇಮಕವಾದ ಸಲಹಾ ಸಮಿತಿಯ ಸದಸ್ಯರನ್ನು ಉದ್ದೇಶಿಸಿ ನಾನು ಮಾತನಾಡಿದ್ದ ಬಗ್ಗೆ ನಿಪಿ-4 ರಲ್ಲಿ

ಪ್ರಕಟಗೊಂಡಿದೆ ಎಂದರೆ ಸರಿಯಲ್ಲ. ಆ ಅವಧಿಯಲ್ಲಿ ನಿಪಿ–5 ರಲ್ಲಿದ್ದ ಸಲಹಾ ಸಮಿತಿ ಸದಸ್ಯರು ಮತ್ತು ಆಡಳಿತಾಧಿಕಾರಿ ಕುರಿತಾಗಿ ಮಾತ್ರ ಅಂಕೋಲಾದ ಜನತೆಗೆ ಮಾಹಿತಿ ಇದ್ದು, ಉಳಿದ ಜಿಲ್ಲಾ ಹಾಗೂ ರಾಜ್ಯದ ಪದವಿಯಲ್ಲಿರುವವರ ಹೆಸರಿನ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ–5 ರಲ್ಲಿಯ ಸಲಹಾ ಸಮಿತಿಯ ಸದಸ್ಯರ ಒಳ್ಳೆಯ ಆಡಳಿತ ಸಹಿಸದೇ ನಿಪಿ–4 ರಂತೆ ನಾನು ಅವರಿಗೆ ಭಯೋತ್ಪಾದಕರೆಂದು ವಿನಾಕಾರಣ ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–5 ರಲ್ಲಿಯ ಸದಸ್ಯರು ಪಾರದರ್ಶಕತೆಯಿಂದ ಕೆಲಸ ಮಾಡಿದ್ದರು ಎಂದರೆ ಮಾಹಿತಿ ಇಲ್ಲ. ನನ್ನ ಮಾಹಿತಿ ಪ್ರಕಾರ ನಿಪಿ–4 ರಲ್ಲಿ ಪ್ರಕಟಿಸಲಾಗಿದೆ ಎಂದರೆ ಸರಿಯಲ್ಲ.

ನಾನು ನೀಡಿದ ಪತ್ರಿಕಾ ಪ್ರಕಟಣೆಗೂ ಸಹಿ ಮತ್ತು ಅವರ ವಿವರವನ್ನು ನನ್ನ ಹೆಸರಿನೊಂದಿಗೆ ನೀಡುತ್ತೇನೆ. ಆ ರೀತಿ ನೀಡುವ ಬಗ್ಗೆ ದಾಖಲೆ ಹಾಜರುಪಡಿಸುತ್ತೀರಾ ಎಂದರೆ ಪೇಪರ್ ನವರ ಬಳಿ ಇರುತ್ತದೆ ಎಂದು ಹೇಳುತ್ತಾರೆ. ಪತ್ರಿಕಾ ಪ್ರಕಟಣೆ ಕುರಿತಾಗಿ ವಾದಿ ನೀಡಿದ ನೋಟಿಸಿಗೆ ನಾನು ಉತ್ತರ ನೀಡಿದ್ದೇನೆ. 1 ಮತ್ತು 2 ನೇ ಪ್ರತಿವಾದಿಯರು ನೀಡಿದ ಉತ್ತರದ ನೋಟಿಸಿನಲ್ಲಿ ನನ್ನ ಮಾಹಿತಿ ಮೇರೆಗೆ ಪ್ರಕಟಿಸಲಾಗಿದೆ ಎಂದು ತಿಳಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಮೂಲಕ ಏನಾದರೂ ಪ್ರಕಟಗೊಳ್ಳಲು 2 ನೇ ಪ್ರತಿವಾದಿ ಕಚೇರಿಗೆ ಮಾಹಿತಿ ಹೋದರೆ ಅವರು ಕೂಡಲೇ ಸ್ಪಂದಿಸುತ್ತಾರೆಂದರೆ ಸರಿಯಲ್ಲ. ಆಗಿನ ಸಲಹಾ ಸಮಿತಿ ಪಾರದರ್ಶಕವಾಗಿ ಆಡಳಿತ ನಡೆಸುವುದನ್ನು ಸಹಿಸದೇ ಬುಧ್ಧ್ಯಾಪೂರ್ವಕವಾಗಿ ನಾನು ಪತ್ರಿಕೆಯಲ್ಲಿ ಅವರ ವಿರುದ್ಧ ಪ್ರಕಟಿಸುವ ವ್ಯವಸ್ಥೆ ಮಾಡಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.